# ಬತ್ತೀಸರಾಗ

ಬತ್ತೀಸ ಎಂದರೆ ಮೂವತ್ತೆರಡು ಎಂದರ್ಥ. ಇದು ವಚನಕಾರರಲ್ಲೂ ಬಳಕೆಯಾಗಿದೆ. ಅನಂತರ ಹಲವು ತತ್ತ್ವಪದಕಾರರಲ್ಲೂ ಬಳಕೆಯಾಗಿದೆ. ಶಿಶುನಾಳ ಶರೀಫರ ಒಂದು ತತ್ತ್ವಪದದಲ್ಲಿಯೂ ಇದು ಅರ್ಥಪೂರ್ಣವಾಗಿ ಬಳಕೆಗೊಂಡಿದೆ. ಬತ್ತೀಸರಾಗ ಎಂದರೆ ಮೂವತ್ತೆರಡು ರಾಗವೆಂದು ಸಾಮಾನ್ಯವಾದ ಅರ್ಥ. ಸಂಗೀತದಲ್ಲಿ 'ರಾಗ' ಎಂಬ ಪದಬಳಕೆ ಪ್ರಸಿದ್ಧಿಯುಂಟಷ್ಟೆ. ರಾಗ – ಎಂಬ ಪರಿಕಲ್ಪನೆಯನ್ನು ತುಸು ತಿಳಿಯೋಣ. ರಾಗ ಎಂಬುದು ಒಂದು ಶಬ್ದಚಿತ್ರ. ಈ ರಾಗವನ್ನು ಹತ್ತುವಿಧದ ಗಮಕದಲ್ಲಿ ಚೆನ್ನಾಗಿ, ನಯವಾಗಿ ಹಾಡಿದರೆ ರಂಜಕವಾಗಿರುತ್ತದೆ. ಒಂದೊಂದು ರಾಗವೂ ಬೇರೆ ಬೇರೆ ರಸವಿಶೇಷವನ್ನು ಹೊಂದಿರುತ್ತದೆ. ಸಂಗೀತಗಾರನು ರಾಗವನ್ನು ಹೃದಯದಲ್ಲಿ ಅನುಭವಿಸಬೇಕು. ಅನಂತರ ಸುಸ್ವರದಲ್ಲಿ ಹೊರಹೊಮ್ಮಿಸಿದಾಗ ಅದು ಒಂದು ಸ್ವರೂಪವನ್ನು ಪಡೆಯುತ್ತದೆ. ರಸಿಕರು ಆ ರಾಗವನ್ನು ಕೇಳಿ ಅನುಭವಿಸುತ್ತಾರೆ. ರಾಗವು ಪ್ರಮುಖವಾಗಿ ಸ್ವರ–ನಾದ–ಲಯ ಇವುಗಳ ಸಂಯುಕ್ತರೂಪ. ಇಲ್ಲಿಗೆ ಇದಿಷ್ಟು ಸಾಕು. ರಾಗ–ಅನುರಾಗ–ವಿರಾಗ ಎಂಬಂಥ ಪದಗಳುಂಟಷ್ಟೆ. ರಾಗ ಪ್ರಮುಖವಾಗಿ ರಕ್ತಿಭಾವವನ್ನು ಹೊಂದಿರುತ್ತದೆ. ಆಗ ಅದು ಅನುರಾಗ. ಅದು ವಿರಕ್ತಭಾವವನ್ನು ತಾಳಿದರೆ ವಿರಾಗ. ರಾಗ ಮತ್ತು ವಿರಾಗ ಇವುಗಳ ನಡುವೆ ಒಂದು ಸಣ್ಣ ಪರದೆ ಮಾತ್ರ ಉಂಟು.

ಶಿಶುನಾಳ ಶರೀಫರು ತಮ್ಮೊಂದು ತತ್ತ್ವಪದದಲ್ಲಿ 'ತರವಲ್ಲ ತಗಿ ನಿನ್ನ ತಂಬೂರಿ ಸ್ವರ, ಬರಿದೆ ಬಾರಿಸದಿರು ತಂಬೂರಿ' ಎಂದು ಹೇಳುತ್ತಾರೆ. ಸಂಗೀತಗಾರರು ತಂಬೂರಿಯನ್ನು ಶ್ರುತಿಗಾಗಿ ಇಟ್ಟುಕೊಳ್ಳುತ್ತಾರೆ. ಗಾಯಕನು ಸ್ವರ ಹಚ್ಚಿದಾಗ ಶೃತಿಯು ಆತನ ನೆರವಿಗೆ ಬರುತ್ತದೆ. ಆದರೆ, ಇಲ್ಲಿ 'ಜೀವನ ಸಂಗೀತದ' ಬಗೆಗೆ ಶರೀಫರು ಹೇಳುತ್ತಿದ್ದಾರೆ. ಜೀವನವು ಭಗವಂತ ಕೊಟ್ಟಿರುವ ಅಪೂರ್ವ ಕೊಡುಗೆ. ನಾವು ಜೀವನವನ್ನು ಪರಿಶುದ್ಧವಾದ ನೀರಿನಂತೆ ಭಾವಿಸಬೇಕು. ಅಲ್ಲಿ ಒಡಕುಗಳು ಇರಬಾರದು. ಜೀವನವು ಅಸಹನೆ, ಅಸಹಕಾರ, ಅಪನಂಬಿಕೆಗಳ ಮೂಟೆಯಾದರೆ, ಅದು ಒಡಕಿನ ನೆಲೆಯಾಗಿ ಬಿಡುತ್ತದೆ. ಅದಕ್ಕಾಗಿ ಶರೀಫರು 'ಬರಿದೆ ಬಾರಿಸದಿರು ಎಂದಿದ್ದಾರೆ!'

ನಮ್ಮ ಜೀವನವನ್ನು ಎತ್ತೆತ್ತಲೋ ಕೊಂಡೊಯ್ಯುವುದಲ್ಲ. ಅಲ್ಲಿ ತಾಳವೂ ಇರಬೇಕು; ಮೇಳವೂ ಇರಬೇಕು. ಕೂಡಿ ಬಾಳಿದರೆ ಅದೇ ಸ್ವರ್ಗ. ಇಂಥ ಮಾತುಗಳನ್ನು ಕೇಳಿದಾಗ 'ಜೀವನರಾಗದ ಸೌಖ್ಯಭಾವ' ನಮಗೆ ತಿಳಿಯುತ್ತದೆ. ಆಗ ಅಲ್ಲಿ 'ಸರಸಸಂಗೀತವು ಮೈದೋರಲು' ಸಾಧ್ಯವಾಗುತ್ತದೆ. ಇದು 'ಜೀವನಸಂಗೀತಕ್ಕೆ' ಅಗತ್ಯವಾಗಿ ಬೇಕಾಗುತ್ತದೆ. ಈ ಪದದಲ್ಲಿ 'ಬತ್ತೀಸರಾಗದ' ಬಗೆಯ ಅರಿಯದಂಥ ಕತ್ತಿಗಿನ್ಯಾಕೆ ತಂಬೂರಿ ಎಂದಿದ್ದಾರೆ. ಸಂಗೀತದಲ್ಲಿ 'ಬತ್ತೀಸರಾಗ' ಎಂಬುದಿಲ್ಲ. ಆದರೆ, 'ಜೀವನಸಂಗೀತದಲ್ಲಿ' ಬತ್ತೀಸರಾಗ ಉಂಟು. ಪ್ರಾಚೀನ ಅನುಭಾವಿಗಳು ಮೂವತ್ತೆರಡು ವಿದ್ಯೆಯನ್ನು ಹೇಳಿದರಷ್ಟೆ. ಆ ಮೂವತ್ತೆರಡು ವಿದ್ಯೆಗಳು ಬಾಳಿಗೆ ಬೇಕೆಂಬುದು ಶರೀಫರ ಒತ್ತಾಯ. ಕನಕದಾಸರು ತಮ್ಮ ಕೀರ್ತನೆಗಳಿಗೆ ಮೂವತ್ತೆರಡು ರಾಗಗಳನ್ನೇ ಬಳಸಿದ್ದಾರೆ. ಇದು ಒಂದು ವಿಶೇಷ. ಅವರ ಎಲ್ಲಾ ಕೀರ್ತನೆಗಳು ಮೂವತ್ತೆರಡು ರಾಗಗಳನ್ನು ಸಾಂಕೇತಿಕವಾಗಿ ಸೂಚಿಸುತ್ತವೆ.

ನಮ್ಮ ಜೀವನ ಸಂಗೀತಕ್ಕೆ ಮೂವತ್ತೆರಡು 'ರಾಗ'ಗಳು ಬೇಕಷ್ಟೆ. ಆ ರಾಗಗಳು ಹೀಗಿವೆ: ಅಷ್ಟವಿಧವಾದ ಪ್ರಕೃತಿ, ಅಷ್ಟವಿಧವಾದ ಭಾವ, ಅಷ್ಟವಿಧವಾದ ಕರ್ಮ ಮತ್ತು ಅಷ್ಟವಿಧವಾದ ಸೌಭಾಗ್ಯ. ನಾವೀಗ ಒಂದೊಂದನ್ನು ತೆಗೆದುಕೊಂಡು ಇದರ ರಹಸ್ಯವನ್ನು ತಿಳಿಯುವ ಯತ್ನವನ್ನು ಮಾಡೋಣ. ಅಷ್ಟವಿಧವಾದ ಪ್ರಕೃತಿ ಎಂದರೆ: ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಅವ್ಯಕ್ತ, ಮಹತ್ ಮತ್ತು ಅಹಂಕಾರ. ಇವು ಎಂಟು ವಿಧವಾದ ಪ್ರಕೃತಿಗಳು. ಗೀತೆಯಲ್ಲಿ 'ಪ್ರಕೃತಿಃ ಅಷ್ಟಧಾ' ಎಂಬ ಮಾತಿರುವುದನ್ನು ನಾವು ಗಮನಿಸಬೇಕು. ಜೀವನರಾಗ ಪ್ರಾರಂಭವಾಗುವುದೇ ಶಬ್ದ, ಸ್ಪರ್ಶ, ರಸ ಗಂಧಾದಿಗಳಿಂದ. ಇವು ಜೀವನ ಸಂಗೀತಕ್ಕೆ ಮೂಲಾಧಾರ. ಈ ಎಂಟನ್ನು ಪ್ರಕೃತಿ ಎಂದು ಶಾಸ್ತ್ರಕಾರರು ಕರೆದಿರುವುದು ಸರಿಯಾಗಿದೆ.

ಇನ್ನು ಅಷ್ಟವಿಧವಾದ ಭಾವಗಳನ್ನು ತಿಳಿಯೋಣ. ಧರ್ಮ–ಅಧರ್ಮ, ಜ್ಞಾನ–ಅಜ್ಞಾನ, ವೈರಾಗ್ಯ–ಅವೈರಾಗ್ಯ, ಐಶ್ವರ್ಯ–ಅನೈಶ್ವರ್ಯ. ಇವು ಭಾವಗಳು. ಜೀವನರಾಗದಲ್ಲಿ ಅಧರ್ಮಕ್ಕೂ ಸ್ಥಾನವುಂಟು; ಧರ್ಮದ ರಹಸ್ಯ ತಿಳಿಯಬೇಕಾದರೆ ಅಧರ್ಮದ ನೆಲೆ ಗೊತ್ತಾಗಬೇಕಷ್ಟೆ. ಈ ನೆಲೆಯಲ್ಲಿ ಮುಂದಿನವುಗಳನ್ನು ತಿಳಿಯುವುದು ಅವಶ್ಯ. ನಮ್ಮ ಬದುಕಿನಲ್ಲಿ ಜ್ಞಾನ–ಅಜ್ಞಾನ, ವೈರಾಗ್ಯ–ಅವೈರಾಗ್ಯ ಮುಂತಾದವು ಪ್ರತಿನಿತ್ಯವೂ ಕಾಡುತ್ತಿರುತ್ತವೆ. ಇವು 'ಭಾವಗಳೆಂದು' ಶಾಸ್ತ್ರಕಾರರು ಕರೆದಿರುವುದು ಸರಿಯಾಗಿದೆ. ಇನ್ನು ಅಷ್ಟವಿಧವಾದ ಕರ್ಮಗಳು ಯಾವುವೆಂದರೆ: ಶಮ, ದಮ, ತಪಸ್ಸು, ಶೌಚ, ಕ್ಷಾಂತಿ, ಯಥಾಜ್ಞಾನ, ವಿಜ್ಞಾನ, ಆರ್ಜವ. ನಾವು ಪ್ರತಿನಿತ್ಯವೂ ಈ ಎಂಟು ಬಗೆಯ ಕರ್ಮಗಳಲ್ಲಿ ಸದಾ ತೊಡಗಿರುತ್ತೇವೆ. 'ಪ್ರಕೃತಿಯು' ತಳಹದಿಯಾದರೆ, 'ಭಾವಗಳು' ಮನೋಲೋಕಕ್ಕೆ ಸೇರಿದವುಗಳು. ಇನ್ನು 'ಕರ್ಮವಾದರೋ' ಇವೆರಡನ್ನು ನಿಯಂತ್ರಿಸುವ ಜ್ಞಾನತಂತುಗಳು. ಇದರ ತಿಳಿವಳಿಕೆ ನಮಗೆ ಬೇಕು. ಅನಂತರ ಕೊನೆಯದಾದ ಸೌಭಾಗ್ಯ ಎಂಟು ಬಗೆಯದು. ಅವು ಗೃಹ, ಶಯ್ಯೆ, ವಸ್ತ್ರ, ಆಭರಣ, ಸ್ತ್ರೀ, ಪುಷ್ಪ, ಗಂಧ ಮತ್ತು ತಾಂಬೂಲ. ಇಲ್ಲಿ ಲೌಕಿಕವೂ ಅಲೌಕಿಕವೂ ಸಂಲಗ್ನಗೊಳ್ಳುತ್ತದೆ. ಇವು ನಮ್ಮ ಬದುಕಿಗೆ ಬೇಕೇ ಬೇಕು! ಇಲ್ಲಿಗೆ ಒಟ್ಟು ಮೂವತ್ತೆರಡು ಜೀವನ ರಾಗಗಳು ಆದುವು. ಇವಿಷ್ಟು ಬತ್ತೀಸರಾಗಗಳು.

ಜೀವನದ ಅಸ್ತಿತ್ವ ಪ್ರಾರಂಭವಾಗುವುದು ಪ್ರಕೃತಿಯಿಂದ ಎಂಬುದನ್ನು ಅರ್ಥ ಮಾಡಿಕೊಂಡರೆ, ಮುಂದಿನ ಎಂಟು ವಿಧವಾದ 'ಭಾವವು' ನೆಲೆಗೂಡಲು, ತಿಳಿಯಲು ನಮಗೆ ಸಾಧ್ಯವಾಗುತ್ತದೆ. ಪ್ರಕೃತಿ–ಭಾವಗಳು ಬಂದ ನಂತರ 'ಕರ್ಮಗಳು' ನೆಲೆ ಹತ್ತಬೇಕು. ಆಮೇಲೆ ಸೌಭಾಗ್ಯವು ಬಂದು ಕೂಡಲು ಸಾಧ್ಯವಾಗುತ್ತದೆ. ಜೀವನಶ್ರುತಿಯು ಅಪಸ್ವರಗೊಳ್ಳದೆ ಮುಂದುವರಿಯಲು 'ಬತ್ತೀಸರಾಗ' ಬೇಕು. ಬಸವಣ್ಣ, ಕನಕದಾಸ, ಶರೀಫರಲ್ಲದೆ, ಉಳಿದವರಲ್ಲಿ 'ಬತ್ತೀಸರಾಗ' ಎಂಬ ಅರ್ಥಪೂರ್ಣ ಜೀವನಸಂಗೀತ ಬಂದು ಹೋಗುತ್ತದೆ!

■ ಪುರಂಜೀವಿ

## ಮಾತೇ ಮುತ್ತು

- ಮನುಷ್ಯ ಕೋಪವನ್ನು ಪ್ರೀತಿಯಿಂದ, ಪಾಪವನ್ನು ಸದಾಚಾರದಿಂದ, ಮಿಥ್ಯೆಯ ಮಾತನ್ನು ಸತ್ಯದಿಂದ ಗೆಲ್ಲಬಲ್ಲ.
  —ಗೌತಮ ಬುದ್ಧ
- ಜಗತ್ತು ಪೂಜಿಸುವುದು ಪ್ರತಿಭಾವಂತ ಶಕ್ತಿಶಾಲಿಗಳನ್ನೇ ಹೊರತು ದುರ್ಬಲರನ್ನಲ್ಲ.
  —ಸ್ವಾಮಿ ವಿವೇಕಾನಂದ
- ಸರಳತೆಯು ಪರಿಪೂರ್ಣತೆಯ ಲಕ್ಷಣ.
  —ಪಂಡಿತ ತಾರಾನಾಥ
- ನಮ್ಮ ಆಚಾರ, ವಿಚಾರಗಳಿಂದ ಮಾತ್ರ ನಾವು ಉತ್ತಮರು ಅಥವಾ ಅಧಮರು ಎನಿಸಿಕೊಳ್ಳುತ್ತೇವೆಯೇ ಹೊರತು ಜಾತಿಯಿಂದಲ್ಲ.
  —ಬಸವಣ್ಣ
- ನಮ್ಮ ಎಲ್ಲ ಸಮಸ್ಯೆಗಳು ಪರಿಹಾರಗೊಳ್ಳುವ ತನಕ ಚಳವಳಿಗಳನ್ನು ಜೀವಂತವಾಗಿಟ್ಟಿರುವುದು ಅತ್ಯಗತ್ಯ.
  —ಕುವೆಂಪು
- ನೀವು ಒಬ್ಬರೇ ಇದ್ದಾಗ ಆಲೋಚನೆಗಳ ಮೇಲೆ ನಿಗಾ ಇರಲಿ. ಗುಂಪಿನಲ್ಲಿ ಇದ್ದಾಗ ಮಾತುಗಳ ಮೇಲೆ ನಿಗಾ ಇರಲಿ.
  —ಅನಾಮಿಕ
- ಲೋಕದಲ್ಲಿ ಎಷ್ಟು ಜನರಿದ್ದಾರೋ ಅಷ್ಟು ಅನುಭವಗಳಿವೆ. ಅವುಗಳಲ್ಲಿ ಕೆಲವು ಗ್ರಾಹ್ಯವಾದವು, ಕೆಲವು ತ್ಯಾಜ್ಯ ಎಂದು ನಿರ್ಧಾರ ಮಾಡುವ ಒರೆಗಲ್ಲು ಯಾವುದು? ಅವರವರ ಸ್ವಂತ ಅನುಭವವೇ.
  —ಜಿ.ಪಿ. ರಾಜರತ್ನಂ